Friday 23rd December 2022, Page No.04

## RVCE: Three days workshop on technical science renovation

ಪ್ರಜಾ ವಾಹಿನಿ

# ತಾಂತ್ರಿಕ ವಿಜ್ಞಾನ, ನವೀಕರಣ ಕಾರ್ಯಾಗಾರ

● ಪ್ರಜಾವಾಹಿನಿ-ಯಶವಂತಪುರ

ಆರ್.ವಿ.ಕಾಲೇಜಿನಲ್ಲಿ ಸುಸ್ಥಿರ ಪರಿಹಾರಗಳಿಗಾಗಿ ಗಣಕ ವ್ಯವಸ್ಥೆಗಳು ಮತ್ತು ಮಾಹಿತಿ ತಂತ್ರಜ್ಞಾನ ಎಂಬ ಹೊಸ ಯುಗದ ತಾಂತ್ರಿಕ ವಿಜ್ಞಾನ ಹಾಗೂ ನವೀಕರಣದ ಕುರಿತು ಮೂರು ದಿನಗಳ ಕಾಲ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೈಸೂರು ಮುಖ್ಯರಸ್ತೆಯಲ್ಲಿರುವ ಆರ್.ವಿ.ಕಾಲೇಜಿನಲ್ಲಿ 6ನೇ ಅಂತಾರಾಷ್ಟ್ರೀಯ ಸಮ್ಮೇಳನದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ಉದ್ಘಾಟನೆಯನ್ನು ಜಾಗತಿಕ ಪೌಂಡರೀಸ್‌ನ ಇಂಟರ್ ನೆಟ್ ಪ್ರೋಟೊಕಾಲ್ ಅಭಿವೃದ್ಧಿ ಮತ್ತು ವಿನ್ಯಾಸದ ಸಿಇಒ ಡಾ.ದಿವೇಶ್ ದ್ವಿವೇದಿ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳ ಮನಸ್ಸಿನ ಕುತೂಹಲವನ್ನು ಸ್ಪರ್ಶಿಸುವ ರೀತಿಯಲ್ಲಿ ಪ್ರಾತ್ಯಕ್ಷಿಕೆಗಳ ಮೂಲಕ ಉದ್ಯಮ ತಜ್ಞರು ಕಾರ್ಯಾಗಾರದಲ್ಲಿ ವಿವರಿಸಲಿದ್ದಾರೆ ಎಂದರು.

ಪ್ರತಿಷ್ಠಿತ ಫ್ಲೋರಿಡಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಎಸ್.ಎಸ್.ಅಯ್ಯಂಗಾರ್ ಕಾರ್ಯಾಗಾರದ ಸಮಗ್ರ ವಿವರವುಳ್ಳ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ, ಪ್ರಸ್ತುತ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ತಜ್ಞರ ನಡುವೆ ಬೌದ್ಧಿಕ ಚರ್ಚೆಗಳನ್ನು ಉತ್ತೇಜಿಸುವ ಮೂಲಕ ಶಿಕ್ಷಣ ಮತ್ತು ಉದ್ಯಮದ ಪ್ರಪಂಚಗಳನ್ನು ಒಟ್ಟಿಗೆ ತರುವ ಗುರಿಯನ್ನು ಹೊಂದಲಾಗಿದ್ದು, ಸಂವಾದಗಳು ಕಿರಿಯ ಮನಸ್ಸುಗಳಿಗೆ ಉದ್ದೇಶ ಮತ್ತು ನಿರ್ದೇಶನದ ಪ್ರಜ್ಞೆಯನ್ನು ಒದಗಿಸಲು ಸಹಾಯ ಮಾಡುತ್ತದೆ ಎಂದರು.

ಭಾರತೀಯ ಐಬಿಎಂ ಸಂಶೋಧನೆ ಅಲ್ ಸೈನ್ಸ್ & ಕ್ವಾಂಟಮ್ ಅಪ್ಲಿಕೇಶನ್ಸ್ ನ ಲೀಡ್ ಡಾ.ಎಲ್. ವೆಂಕಟ ಸುಬ್ರಮಣ್ಯಂ, ಐಇಇಇ ಬೆಂಗಳೂರು ವಿಭಾಗದ ಪ್ರಾಧ್ಯಾಪಕಿ ಪ್ರೊ. ಡಾ.ದೀಪಾ ಶೆಣೈ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್ ,ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಹ್ಮಣ್ಯ, ಉಪಪ್ರಾಂಶುಪಾಲೆ ಡಾ.ಕೆ.ಎಸ್.ಗೀತಾ ಉಪಸ್ಥಿತರಿದ್ದರು.

